SECOND YEAR

# Kerala Board Question Paper 2023



Download PDF
aglasem.com

Reg. No. : ......................................

Name : ..........................................

**SY-506**

**SECOND YEAR HIGHER SECONDARY EXAMINATION, MARCH 2023**

Part – II

**KANNADA (Language)**

Maximum : 80 Scores

Time : **2½** Hours

Cool-off time : **15** Minutes

**ವಿದ್ಯಾರ್ಥಿಗಳಿಗೆ ಸೂಚನೆಗಳು :**

- ಮೊದಲ **15** ನಿಮಿಷ 'ಕೂಲ್ ಆಫ್ ಸಮಯ' ವಾಗಿದೆ. ಪ್ರಶ್ನೆಗಳನ್ನು ಓದಿ ಅರ್ಥೈಸಿಕೊಳ್ಳುವುದಕ್ಕೂ ಉತ್ತರಗಳ ಬಗ್ಗೆ ಯೋಚಿಸುವುದಕ್ಕೂ ಈ ಸಮಯವನ್ನು ಬಳಸಿಕೊಳ್ಳಬಹುದು.
- ಪ್ರಶ್ನೆಗಳನ್ನು ಮತ್ತು ಸೂಚನೆಗಳನ್ನು ಸರಿಯಾಗಿ ಓದಿ ಅರ್ಥೈಸಿಕೊಂಡ ಮೇಲೆ ಉತ್ತರ ಬರೆಯಿರಿ.
- ಉತ್ತರ ಬರೆಯುವಾಗ ಅಂಕ, ಸಮಯ ಮೊದಲಾದವುಗಳನ್ನು ಪರಿಗಣಿಸಬೇಕು.
- ಕೊಟ್ಟಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ.

**(1 ರಿಂದ 4 ರ ವರೆಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆವರಣದಿಂದ ಆರಿಸಿ ಬರೆಯಿರಿ.)** **(4 × 1 = 4)**

1. 'ಸಾವಿರಾರು ನದಿಗಳು' ಪದ್ಯವನ್ನು ಬರೆದವರು ಯಾರು ?

   (ಜಿ.ಎಸ್. ಶಿವರುದ್ರಪ್ಪ, ಕಯ್ಯಾರ ಕಿಞ್ಞಣ್ಣ ರೈ, ಡಾ. ಸಿದ್ಧಲಿಂಗಯ್ಯ, ಆರ್.ಎನ್. ಜಯಗೋಪಾಲ್)

2. ಕೆಳಗೆ ಕೊಟ್ಟಿರುವವುಗಳಲ್ಲಿ ಅನ್ಯದೇಶೀಯ ಪದ ಯಾವುದು ?

   (ನೆಲ, ಬಯಲು, ಪೇಪರು, ನೇಸರ)

3. 'ಗುರುವಚನಮಲಂಘನೀಯಂ' – ಎಂದು ಹೇಳಿದವರು ಯಾರು ?

   (ದುರ್ಯೋಧನ, ಧೃತರಾಷ್ಟ್ರ, ಸಂಜಯ, ಗಾಂಧಾರಿ)

4. 'ದಾದಾ ಸಾಹೇಬ್ ಫಾಲ್ಕೆ' ಪ್ರಶಸ್ತಿಯನ್ನು ಪಡೆದ ಮೊದಲ ಕನ್ನಡಿಗ ಯಾರು ?

   (ಡಾ. ರಾಜ್ ಕುಮಾರ್, ವಿಷ್ಣುವರ್ಧನ್, ಶಂಕರ್ ನಾಗ್, ಲೋಕೇಶ್)

**(5 ರಿಂದ 10 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿರಿ.) (4 × 1 = 4)**

5. ದಂಡು – ಈ ಪದದ ಅರ್ಥವನ್ನು ಬರೆಯಿರಿ.

6. ನಿತ್ಯ – ಈ ಪದದ ತದ್ಭವ ರೂಪವನ್ನು ಬರೆಯಿರಿ.

7. ನಯನ – ಈ ಪದದ ಎರಡು ಪರ್ಯಾಯ ಪದಗಳನ್ನು ಬರೆಯಿರಿ.

8. ನೋಡು – ಇದರ ಎರಡು ನಿಷೇದಾರ್ಥ ರೂಪಗಳನ್ನು ಬರೆಯಿರಿ.

9. ಉರಗೇಂದ್ರ – ಈ ಪದವನ್ನು ವಿಂಗಡಿಸಿ ಬರೆಯಿರಿ.

10. ಪುಲಿಗೆರೆ ಸೋಮಕವಿಯ ಶತಕಗಳಲ್ಲಿ ಕಂಡುಬರುವ ಅಂಕಿತ ಯಾವುದು ?

**(11 ರಿಂದ 17 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿರಿ.) (5 × 2 = 10)**

11. ಕೆಳಗೆ ಕೊಟ್ಟಿರುವ ಮಾತಿನ ಸಂದರ್ಭವನ್ನು ಬರೆಯಿರಿ.
    ‘ಆಳ್ ಮುಂದೆ ನಡೆದಲ್ಲದೆ ಅರಸು ನಡೆವನೇ’

12. ಕೆಳಗೆ ಕೊಟ್ಟಿರುವ ಪದ್ಯ ಸಾಲುಗಳ ಸ್ವಾರಸ್ಯ ಬರೆಯಿರಿ.
    ತನ್ನ ಮುಖ ಬೆನ್ನುಗಳು ತನ್ನ ಕಣ್ಣಿಗೆ ಮರೆಯು
    ತನ್ನ ಗುಣದೋಷಗಳನರಿಯೆ – ಇದನರಿದ
    ಇನ್ನೊಬ್ಬ ಬೇಕು ಸರ್ವಜ್ಞ

13. ಅಡಿಗೆರೆ ಎಳೆದ ಪದವು ಕ್ರಿಯಾಪದವಾಗಿ ಬರುವಂತೆ ಬೇರೊಂದು ವಾಕ್ಯವನ್ನು ರಚಿಸಿರಿ.
    ಜೋರಾಗಿ ಬೀಸಿದ ಗಾಳಿಗೆ ಹಂಚುಗಳೆಲ್ಲ ಹಾರಿ ಹೋದವು.

14. ಪ್ಲಾಸ್ಟಿಕ್ ಮುಕ್ತ ಪರಿಸರ ಎಂಬ ಆಶಯವನ್ನು ಪ್ರತಿಬಿಂಬಿಸುವಂತೆ ಎರಡು ಘೋಷಣಾ ವಾಕ್ಯಗಳನ್ನು ಸಿದ್ಧಪಡಿಸಿರಿ.

15. ಲೇಖನ ಚಿಹ್ನೆಗಳನ್ನು ಬಳಸಿಕೊಂಡು ಬರೆಯಿರಿ.
    ಎಂಥ ಪಿಟೀಲು ಬಿಸಾಡಬೇಕು ಎಂದರೆ ಅವರಿಗೆ ಕಷ್ಟವಲ್ಲವೇ ತಿರುಗಿ ಸಮಾಧಾನ ಮಾಡೋಣ ಎಂದು ಹೇಳಿದನು ವೆಂಕಟರಮಣ.

16. ಅಡಿಗೆರೆ ಎಳೆದ ಪದದ ವಿಭಕ್ತಿಯನ್ನು ಹೆಸರಿಸಿರಿ.
    ಸುಬ್ಬಣ್ಣನು ಬಾರಿಸಿದ ಭೈರವೀ ರಾಗವನ್ನು ಕೇಳಿ ಜನರು ಸಂತೋಷದಲ್ಲಿ ಮುಳುಗಿದರು.

oglasem.com

17. ಕೆಳಗೆ ಕೊಟ್ಟಿರುವ ವಾಕ್ಯವನ್ನು ಸರಳವಾಕ್ಯಗಳಾಗಿ ಪರಿವರ್ತಿಸಿರಿ.

ನಾನು ಜೋಂಡಿನ ಒಳಗೆ ಇಣುಕಿ ನೋಡಿದಾಗ ಅಲ್ಲಿದ್ದ ಇನ್ನೊಂದು ಹಂದಿಮರಿ ನೆಗೆದು ಓಡಿತು.

**(18 ರಿಂದ 22 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿರಿ.)** **(4 × 4 = 16)**

18. ಸರಿ ಹೊಂದಿಸಿ ಬರೆಯಿರಿ.

| ಅ | ಆ |
|---|---|
| ಕಯ್ಯಾರ ಕಿಞ್ಞಣ್ಣ ರೈ | ನಾಡಸಿರಿ |
| ರೂಪಾ ಹಾಸನ | ಊರ್ಮಿಳಾ |
| ಆರ್.ಎನ್. ಜಯಗೋಪಾಲ್ | ಅಪ್ಪನೂ ಒಲೆಯುರಿಯೂ |
| ನಂಜುಂಡ ಕವಿ | ಆಗದು ಎಂದು |

19. ಕೆಳಗೆ ನೀಡಲಾದ ಪದ್ಯದ ಭಾವಾರ್ಥವನ್ನು ಬರೆಯಿರಿ.

ಮನಸ್ಸೊಂದಿದ್ದರೆ ಮಾರ್ಗವು ಉಂಟು
ಕೆಚ್ಚೆದೆ ಇರಬೇಕೆಂದು ! ಕೆಚ್ಚೆದೆ ಇರಬೇಕೆಂದು
ಕೆತ್ತಲಾಗದು ಕಗ್ಗಲ್ಲೆಂದು ಎದೆಗುಂದಿದ್ದರೆ ಶಿಲ್ಪಿ
ಆಗುತ್ತಿತ್ತೆ ಕಲೆಗಳ ಬೀಡು, ಗೊಮ್ಮಟೇಶನ ನೆಲೆವೀಡು
ಬೇಲೂರು, ಹಳೇಬೀಡು ! ಬೇಲೂರು, ಹಳೇಬೀಡು

aglasem.com

20. 'ದೊರೆಗಳ್ಗೆತ್ತಣ ನಂಟರ್ಕೈ ?' ಎಂಬುದನ್ನು ಸೋಮಕವಿ ಹೇಗೆ ಸಮರ್ಥಿಸಿರುವನು ? ವಿವರಿಸಿರಿ.

21. ಕೆಳಗಿನ ಪದ್ಯಸಾಲುಗಳ ಆಶಯವನ್ನು ಬರೆಯಿರಿ.

ಗೊಣಗುಗಳು ಮೊಳಗಿದಾಗೆಲ್ಲಾ
ಸ್ಥಿತಪ್ರಜ್ಞ ಅಪ್ಪ ನಕ್ಕು ನುಡಿಯುತ್ತಾನೆ
ಒಲೆಯುರಿಸುವುದೆಂದರೆ
ಬಿಸಿನೀರು ಕಾಯಿಸುವುದಲ್ಲ ಮಗನೇ
ಹುಡುಕಿ ಸುಟ್ಟು ಸುತ್ತ ಮುತ್ತಲಿನ ಕೊಳೆ
ದಿವ್ಯವಾಗುತ್ತಾ ಹದಗೊಳ್ಳುವಾ ಕಲೆ
ಬದುಕು ಮಾಗಲು ಬೆವರು ಕಟ್ಟುವಾ ಬೆಲೆ

22. ಕಿವಿ ಮತ್ತು ಪ್ಯಾರಾ ಓಟುರುಕ ಆಮೆಯಿಂದ ಪೇಚಿಗೆ ಸಿಲುಕಿದ ಘಟನೆಯನ್ನು ನಿಮ್ಮ ಮಾತುಗಳಲ್ಲಿ ನಿರೂಪಿಸಿರಿ.

**(23 ರಿಂದ 28 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಒಂದು ಪುಟಕ್ಕೆ ಕಡಿಮೆಯಾಗದಂತೆ ಉತ್ತರಿಸಿರಿ.)** **(5 × 6 = 30)**

23. ‘ಜಾಲಿಯ ಮರದಂತೆ’ ಕೀರ್ತನೆಯಲ್ಲಿ ದುರ್ಜನರ ಅವಗುಣಗಳನ್ನು ಹೇಗೆ ವಿಡಂಬಿಸಲಾಗಿದೆ ? ವಿಶದಪಡಿಸಿರಿ.

24. ಒಂದು ಚಲನಚಿತ್ರದ ಯಶಸ್ಸಿನಲ್ಲಿ ಹಿನ್ನೆಲೆ ಸಂಗೀತ ಮತ್ತು ಹಾಡುಗಳ ಮಹತ್ವದ ಕುರಿತು ಕಿರು ಲೇಖನವೊಂದನ್ನು ಬರೆಯಿರಿ.

25. ನಗರೀಕರಣ, ಅರಣ್ಯ ನಾಶ ಮೊದಲಾದ ಕಾರಣಗಳಿಂದ ವನ್ಯಮೃಗಗಳ ಸಂತತಿ ಕಡಿಮೆಯಾಗುತ್ತಿವೆ. ಆ ಕುರಿತು ಜಾಗೃತಿ ಮೂಡಿಸಲು ನೆರವಾಗುವಂತೆ ‘ವಿನಾಶದಂಚಿನಲ್ಲಿರುವ ಜೀವ ಸಂಕುಲ’ ಎಂಬ ವಿಷಯವನ್ನು ಕುರಿತು ಪ್ರಬಂಧವನ್ನು ಬರೆಯಿರಿ.

26. ನಾಡಸಿರಿ ಕಾವ್ಯಭಾಗದಲ್ಲಿ ಕವಿಯು ಕನ್ನಡ ನಾಡಿನ ಸೊಬಗನ್ನು ಹೇಗೆ ವರ್ಣಿಸಿರುವನು ? ವಿವರಿಸಿರಿ.

27. ಸುಬ್ಬಣ್ಣನು ಪಿಟೀಲನ್ನು ನೀರಿನಲ್ಲಿ ಬಿಡಬೇಕೆಂದು ನಿರ್ಧರಿಸಲು ಕಾರಣವಾದ ಹಿನ್ನೆಲೆಯನ್ನು ಬರೆಯಿರಿ.

28. ‘ಅವರವರ ದಾರಿ’ ಕವಿತೆಯ ಆಶಯವನ್ನು ಬರೆಯಿರಿ.

**(29 ರಿಂದ 31 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಒಂದೂವರೆ ಪುಟಕ್ಕೆ ಕಡಿಮೆಯಾಗದಂತೆ ಉತ್ತರಿಸಿರಿ.)** **(2 × 8 = 16)**

29. ‘ನಡೆವುದೊಂದೇ ಭೂಮಿ’ ಪಾಠಭಾಗದ ತ್ರಿಪದಿಗಳಲ್ಲಿ ಪ್ರಕಟವಾದ ಜೀವನಮೌಲ್ಯಗಳ ಕುರಿತು ಬರೆಯಿರಿ.

30. ನೆರೆಯೊಳಗೆ ಸಿಲುಕಿ ಹಸಿವು ಮತ್ತು ಜೀವಭಯದಿಂದ ಕಂಗೆಟ್ಟ ನಾಯಿಯ ಅಸಹಾಯಕ ಪರಿಸ್ಥಿತಿಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

31. ‘ತರುಣ ಸೂರ್ಯಂ ಕತ್ತಲೆಯನೆ ಹೊಕ್ಕಂತಾಯ್ತು’ ಪಾಠದಲ್ಲಿ ಬರುವ ಹರಿಶ್ಚಂದ್ರನ ಪಾತ್ರಚಿತ್ರಣ ಮಾಡಿರಿ.

aglasem.com